# ಉಪನಿಷತ್ತುಗಳಲ್ಲಿ ಭಗವದನುಗ್ರಹ

ಸ್ವಾಮಿ ಪ್ರಬುದ್ಧಾನಂದ

## ಸಾಧಕನ ಸಂದಿಗ್ಧತೆ

**ಆ**ಧ್ಯಾತ್ಮಿಕ ಸಾಧಕನ ಜೀವನವೆಂದರೆ ಏನು? ಅದು ಅವನು ಸತ್ಯದೊಂದಿಗೆ ಕೈಗೊಳ್ಳುವ ಸುದೀರ್ಘವಾದ ಮತ್ತು ಸಂವೇದನೆಯಿಂದ ಕೂಡಿದ ಪ್ರಯೋಗಗಳ ಸರಣಿಯಲ್ಲದೆ ಬೇರೆಯಲ್ಲ. ಅವನ ಇಡೀ ಮಾನಸಿಕ ಮತ್ತು ದೈಹಿಕ ವ್ಯಕ್ತಿತ್ವ ಹಾಗೂ ಬಾಹ್ಯ ಜಗತ್ತುಗಳು ಈ ಕಾರ್ಯದಲ್ಲಿ ತೊಡಗಿರುತ್ತವೆ. ಇದರ ಪ್ರತಿಯೊಂದು ಅಂಶದಲ್ಲಿಯೂ ಸೌಂದರ್ಯವಿರುತ್ತದೆ; ಅಪೂರ್ವತೆ ಇರುತ್ತದೆ. ಸಾಧಕನು ತನ್ನ ಸೀಮಿತತೆಗಳಿಂದ ಹೊರಬರಲು ಪ್ರಯತ್ನಿಸುತ್ತಿರುತ್ತಾನೆ. ಆ ಕಾಲಾವಧಿಯಲ್ಲಿ ಆಧ್ಯಾತ್ಮಿಕ ಕ್ಷೇತ್ರದ ಹೊಸ ಹೊಸ ಸಂಗತಿಗಳನ್ನು ಕಂಡುಹಿಡಿಯುತ್ತಾನೆ. ಹಲವು ವೈವಿಧ್ಯಮಯ ಅಂಶಗಳು ಒಮ್ಮನಸ್ಸಿನಿಂದ ಮಾಡುವ ಈ ಪ್ರಯತ್ನದ ಪ್ರಕ್ರಿಯೆ ಮತ್ತು ಯಶಸ್ಸುಗಳಿಗೆ ಪುಷ್ಟಿಯನ್ನು ನೀಡುತ್ತವೆ. ಅವುಗಳಲ್ಲಿ ಕೆಲವು ಸ್ವಾಭಾವಿಕವಾದುವು; ಮತ್ತೆ ಕೆಲವು ಗುಪ್ತವಾದುವು. ಒಳ್ಳೆಯ ಕುಟುಂಬದ ಹಿನ್ನೆಲೆ, ಆಧ್ಯಾತ್ಮಿಕ ಭಾವನೆಗಳ ಪ್ರಭಾವ, ದೇಹ ಮತ್ತು ಮನಸ್ಸುಗಳ ಸಹಕಾರ – ಇವೆಲ್ಲವೂ ಆಂತರಿಕ ವಿಕಸನಕ್ಕೆ ಸಹಾಯಕವಾಗುತ್ತವೆ. ಈ ಕಾರಣಗಳ ಜೊತೆಜೊತೆಗೆ, ಹಿಂದಿನ ಜನ್ಮಗಳಿಂದ ಸಂಗ್ರಹವಾದ ಸಹಜ ಪ್ರವೃತ್ತಿಗಳು ಮತ್ತು ಅರಿವುಗಳು ಕೂಡ ಇರುತ್ತವೆ. ಇವುಗಳೆಲ್ಲದರ ಸದುಪಯೋಗವನ್ನು ಸಾಧಕನು ಪಡೆದುಕೊಂಡರೆ, ಅವನು ಆಧ್ಯಾತ್ಮಿಕ ಮಾರ್ಗದಲ್ಲಿ ಬಹು ದೂರ ಸಾಗಬಲ್ಲ.

ಈ ಪ್ರಕ್ರಿಯೆಯಲ್ಲಿ ಅವನು ಹಲವು ಬಗೆಯ ಮನಸ್ಸಿನ ವಿಕಾರಗಳಿಗೆ ಒಳಪಡುತ್ತಾನೆ. ಅಂತಹ ವಿಕಾರಗಳು ಸಕಾರಾತ್ಮಕವಾಗಿರಬಹುದು ಅಥವಾ ನಕಾರಾತ್ಮಕವಾಗಿರಬಹುದು. ತನ್ನ ಮಾರ್ಗದಲ್ಲಿ ಯಶಸ್ಸು ಗಳಿಸಿದಾಗ ಅವನು ಹರ್ಷಿಸುತ್ತಾನೆ. ಅಡೆತಡೆಗಳು ಒದಗಿಬಂದಾಗ ಖಿನ್ನತೆಗೆ ಒಳಗಾಗುತ್ತಾನೆ. ಅವನು ಆಶೆಯಿಂದ ನಿರಾಶೆಗೆ ಓಲಾಡುತ್ತಾನೆ. ಪರಿಪೂರ್ಣ ಏಕಾಗ್ರತೆ, ಆತ್ಮವಿಶ್ವಾಸ ಮತ್ತು ಆತ್ಮಶಕ್ತಿಗಳ ಭಾವನೆಯಿಂದ, ಉನ್ನತ ಆದರ್ಶಗಳಿರಲಿ, ನೈತಿಕ ಬಾಳಿನಿಂದ ಏನಾದರೂ ಪ್ರಯೋಜನ ಇದೆಯೇ ಎಂಬ ಸಂದೇಹದತ್ತ ಜಗಿಯುತ್ತಾನೆ. ಒಮ್ಮೊಮ್ಮೆ ಅದಮ್ಯ ಬಲ ಮತ್ತು ಉತ್ಸಾಹಗಳು ಚಿಮ್ಮುತ್ತವೆ; ಮತ್ತೊಮ್ಮೆ ಜಡತೆ ಮತ್ತು ಸಂದಿಗ್ಧತೆಗಳು ಮನೆಮಾಡುತ್ತವೆ. ಕೆಲವೊಮ್ಮೆ ಈ ಮಾರ್ಪಾಡುಗಳು ತೀವ್ರವಾಗಿದ್ದು, ತಾನೇತಾನಾಗಿ ಜರುಗುತ್ತವೆ. ಮತ್ತೊಮ್ಮೆ ಅವು ನಿಧಾನವಾಗಿ ನಡೆಯುವುದರಿಂದ, ಕಣ್ಣಿಗೆ ಬೀಳದೆ ಹೋಗುತ್ತವೆ. ಹಲವಾರು ಬಾರಿ ಆಧ್ಯಾತ್ಮಿಕ ಸಾಧಕನು ತನ್ನ ಮನಸ್ಸು ಚಂಚಲಗೊಂಡಿರುವುದನ್ನು ಗಮನಿಸುತ್ತಾನೆ. ಆದರೆ ಪರಿಸ್ಥಿತಿಯನ್ನು ಸರಿಪಡಿಸಿಕೊಳ್ಳುವ ಸಾಮರ್ಥ್ಯ ಅವನಲ್ಲಿರುವುದಿಲ್ಲ.

> ನೀನು ಶ್ರದ್ಧೆ, ಬಯಕೆ ಮತ್ತು ಪ್ರೀತಿಯ ಅನುಗ್ರಹಗಳಿಗಾಗಿ ಪ್ರಾರ್ಥಿಸುತ್ತೀಯೆ. ಆದರೆ ಪ್ರಾರ್ಥನೆಯಿಂದ ಮಾತ್ರವೇ ಅವು ನಿನಗೆ ದೊರಕಲಾರದು. ನೀನು ಅವುಗಳಿಗಾಗಿ ಪರಿಶ್ರಮ ಪಡಬೇಕು; ನಿನ್ನಲ್ಲಿ ಸಹನೆ ಇರಬೇಕು; ಹಲವಾರು ಸಂಕಷ್ಟಗಳನ್ನು ಎದುರಿಸಬೇಕು. ನೀನು ಕೇಳಿದಾಕ್ಷಣ ಕೊಡಲು ಅವುಗಳನ್ನು ಸೀಸೆಗಳಲ್ಲಿ ಇಟ್ಟಿಲ್ಲ. ಜೀವನದ ವೃಕ್ಷವು ಬೆಳೆದಾಗ, ಸ್ವಾಭಾವಿಕವಾಗಿ ಮೂಡುವ ಫಲಪುಷ್ಪಗಳು ಅವು. ನೀನು ಅವುಗಳಿಗಾಗಿ ಪ್ರಾರ್ಥಿಸಿದಾಗ, ಭಗವಂತನು ಖಂಡಿತ ಉತ್ತರಿಸುವನು. ಆದರೆ ನಾವು ನಡೆಯುತ್ತಿರುವ ಕರ್ತವ್ಯ ಮಾರ್ಗದಲ್ಲಿ ಅವುಗಳಿಗಾಗಿ ನಾವು ಹೋರಾಟ ನಡೆಸುವಂತೆ ಮಾಡುವನು.
>
> – *ಹೆಚ್. ಡಬ್ಲ್ಯು. ಬೀಚರ್*

ಸಾಧಕನಿಗೆ ಎದುರಾಗುವ ಒಂದು ಸಮಸ್ಯೆಯೆಂದರೆ, ಅಡ್ಡಿ ಆತಂಕಗಳ ಈ ಗೋಡೆಗಳನ್ನು ದಾಟಲು ಬೇಕಾದ ಶಕ್ತಿಶಾಲಿ ಪ್ರೇರಣೆ ಅವನಲ್ಲಿ ಇಲ್ಲದಿರುವುದು. ತನ್ನ ಆಧ್ಯಾತ್ಮಿಕ ಸಾಧನೆಗಳನ್ನು ತೀವ್ರಗೊಳಿಸಲು ಅವನು ಯತ್ನಿಸುತ್ತಾನೆ; ತನ್ನ ಪ್ರಗತಿಯ ಗತಿಯನ್ನು ಹೆಚ್ಚಿಸಲು ಅವನು ಬಯಸುತ್ತಾನೆ. ಆದರೆ ಅವನ ಇಚ್ಛಾಶಕ್ತಿಯು ದುರ್ಬಲವಾಗಿರುತ್ತದೆ. ಆಗ ಅವನು ತನ್ನನ್ನು ಆಧ್ಯಾತ್ಮಿಕ ಸಾಧನೆಯತ್ತ ಪ್ರೇರೇಪಿಸುವ ಅನುಗ್ರಹಶಕ್ತಿಯ ತುರ್ತು ಅಗತ್ಯವನ್ನು ಬಹಳವಾಗಿ ಭಾವಿಸುತ್ತಾನೆ. ಮತ್ತೆ ಕೆಲವು ಸಂದರ್ಭಗಳಲ್ಲಿ ತಾನು ಪಾತಾಳಕ್ಕೆ ಇಳಿದುಬಿಟ್ಟಿರುವೆನೇನೋ ಎಂದು ಅವನಿಗೆ ಅನ್ನಿಸುತ್ತದೆ. ಮತ್ತೊಮ್ಮೆ ತನ್ನ ಅಹಂಕಾರ, ಮನಸ್ಸು, ದೇಹ ಮುಂತಾದ ಹತ್ತು ಹಲವು ಒಳಗಿನ ಹಾಗೂ ಹೊರಗಿನ ಶಕ್ತಿಗಳು ಎಬ್ಬಿಸಿರುವ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿರುವೆನೆಂದು ಅವನಿಗೆ ಭಾಸವಾಗುತ್ತದೆ.

ಅಂಥ ಸಾಧಕನು ನೀತಿವಂತನಾಗಿದ್ದರೆ, ಅವನಲ್ಲಿ ಸ್ವಲ್ಪವಾದರೂ ಆಂತರಿಕ ಶಕ್ತಿ ಬೆಳೆಯುತ್ತದೆ; ಸ್ಥಿರತೆ ಮೂಡುತ್ತದೆ. ಆದರೆ ಅವನು ನೀತಿನಿಯಮಗಳನ್ನು ಪಾಲಿಸದಿದ್ದರೆ, ತನ್ನ

ಪೂಜ್ಯ ಸ್ವಾಮೀಜಿಯವರು ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೋ ನಗರದ ಉತ್ತರ ಕ್ಯಾಲಿಫೋರ್ನಿಯಾ ವೇದಾಂತ ಸೊಸೈಟಿಯ ಮುಖ್ಯಸ್ಥರು. ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳಾದ ಇವರು ಗಾಢ ಆಧ್ಯಾತ್ಮಿಕ ಅನುಭಾವಿಗಳು ಮತ್ತು ವಿದ್ವಾಂಸರು. ರಾಮಕೃಷ್ಣ ಮಹಾಸಂಘದ ಆಂಗ್ಲಪತ್ರಿಕೆ 'ವೇದಾಂತಕೇಸರಿ'ಯಲ್ಲಿ ಪ್ರಕಟವಾದ ಸ್ವಾಮೀಜಿಯವರ ಲೇಖನದ ಕನ್ನಡಾನುವಾದವಿದು. ಭಾವಾನುವಾದ : ಸಂ.

ಆಂತರಿಕ ಸಂತುಲನವನ್ನು ಕಳೆದುಕೊಂಡು, ಆ ಸ್ಥಿರತೆಯ ಚೌಕಟ್ಟಿನಿಂದ ತಾನು ದೂರವಾದಂತೆ ಭಾವಿಸುತ್ತಾನೆ. ಹೀಗೆ ಅವನು ಕಾರಣ–ಕಾರ್ಯಗಳ ವಿಷಚಕ್ರಗಳ ಸರಣಿಯಲ್ಲಿ ಸಾಗಿಹೋಗುತ್ತಾನೆ. ಕೊಳೆಯನ್ನು ಕೊಳೆನೀರಿನಿಂದ ತೊಳೆಯಲಾರದು; ಸುಳಿಯೇ ಸುಳಿಯಿಂದ ಪಾರು ಮಾಡಲಾರದು. ಅದರಂತೆ, ಮೇಲಿನ ಸಂಕೀರ್ಣ ಬಲೆಯಿಂದ ತನ್ನನ್ನು ಹೊರಕ್ಕೆ ಎಳೆಯುವ ಯಾವ ಶಕ್ತಿಯೂ ಇಲ್ಲವೆಂದೇ ಅವನು ಕಂಡುಕೊಳ್ಳುತ್ತಾನೆ. ಏಕೆಂದರೆ ಪರಿಹಾರವೇ ಕೆಲವೊಮ್ಮೆ ವ್ಯಾಧಿಗಿಂತಲೂ ಕೆಟ್ಟದಾಗಿರುತ್ತದೆ. ಹಾಗೆಂದೇ, ಈ ಬವಣೆಯಿಂದ ಹೆಚ್ಚು ಹೆಚ್ಚು ತಪ್ಪಿಸಿಕೊಳ್ಳಲು ಯತ್ನಿಸುತ್ತಿರುವಾಗಲೇ, ಮತ್ತೂ ಮತ್ತೂ ಅದರಲ್ಲಿ ಅವನು ಸಿಕ್ಕಿಹಾಕಿಕೊಳ್ಳುತ್ತಾನೆ. ಅವನ ಉದ್ದೇಶ ಒಳ್ಳೆಯದಾಗಿದ್ದರೂ ಹೀಗೆ ಆಗಿಬಿಡುತ್ತದೆ. ಆಗವನ ಮಾನಸಿಕ ಸ್ಥಿತಿಯು ಎಷ್ಟು ಸಂಕೀರ್ಣ ವಾಗಿಬಿಡುತ್ತದೆಯೆಂದರೆ, ವೈಚಾರಿಕವಾಗಲಿ, ಭಾವನಾತ್ಮಕವಾಗಲಿ ಅದನ್ನು ನಿರ್ವಹಿಸುವುದು ತನಗೆ ದುಸ್ತರವೆಂದು ಅವನು ಕಂಡು ಕೊಳ್ಳುತ್ತಾನೆ. ಬಲೆಯಲ್ಲಿ ಸಿಕ್ಕಿಬಿದ್ದ ಪಕ್ಷಿಯಂತೆ ಅವನು ತನ್ನನ್ನೇ ಸಿಕ್ಕಿಸಿಕೊಳ್ಳುತ್ತಾನೆ ಮತ್ತು ತನ್ನಂತರಂಗದ ಪ್ರತಿಕ್ರಿಯೆಗಳಿಂದ ಭಯಭೀತನಾಗುತ್ತಾನೆ. ಕರ್ಮಸಿದ್ಧಾಂತದ ಪ್ರಕಾರ, ಈಗಾಗಲೇ ಮಾಡಿರುವ ಕರ್ಮದ ಪರಿಣಾಮದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅವನು ತಿಳಿದುಕೊಳ್ಳುತ್ತಾನೆ. ಪ್ರತಿಯೊಂದು ಕ್ರಿಯೆಗೂ ಅದಕ್ಕೆ ಸಂಬಂಧಿಸಿದ ಫಲ ಇದ್ದೇ ಇರುತ್ತದೆ. ಸಾಪೇಕ್ಷ ಜಗತ್ತಿನಲ್ಲಿ ಈ ನಿಯಮವು ಪಕ್ಷಪಾತರಹಿತವಾಗಿ ಜಾರಿಗೊಳ್ಳುತ್ತದೆ.

ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಗುಲಾಮನು ಗುಲಾಮನೇ ಎಂದು ತಿಳಿ. ಅವನನ್ನು ಆರೈಕೆ ಮಾಡುತ್ತಿದ್ದರೇನು ಅಥವಾ ಚಾವಟಿಯಿಂದ ಹೊಡೆಯುತ್ತಿದ್ದರೇನು. ಅವನ ಸಂಕೋಲೆ ಗಳು ಚಿನ್ನದಾಗಿದ್ದರೇನು, ಅವು ಅವನನ್ನು ಬಂಧಿಸಲು ಸ್ವಲ್ಪವೂ ಕಡಮೆ ಶಕ್ತಿ ಹೊಂದಿರಲಾರವು."

## ಸಹಾಯಕ್ಕಾಗಿ ಯಾಚನೆ

ಅಂಥ ಸಾಧಕನಿಗೆ ಎಲ್ಲೆಡೆಯೂ ಬಾಗಿಲುಗಳು ಮುಚ್ಚಿರುವ ಹಾಗೆ ಕಂಡುಬರುತ್ತವೆ. ಆದರೂ, ಅವನಿಗೆ ಇಷ್ಟೊಂದು ಕಷ್ಟ ಗಳಿದ್ದಾಗ್ಯೂ ಜೀವನದ ಆವೇಗವು, ಅವನನ್ನು ಅತ್ತಿತ್ತ ತಳ್ಳುತ್ತಲೇ ಇರುತ್ತದೆ. ಇಂದಲ್ಲ ನಾಳೆ, ತನ್ನಲ್ಲಿರುವ ಸಂಪನ್ಮೂಲಗಳೆಲ್ಲವೂ, ಅವೆಷ್ಟೇ ವಿಸ್ತೃತವಾಗಿದ್ದರೂ, ತನ್ನ ಪ್ರಯತ್ನಗಳಿಗೆ ಸಾಕಾಗುವದಿಲ್ಲ ಎಂದು ತಿಳಿದುಕೊಂಡು ಅವನು ಬಾಹ್ಯ ಸಹಾಯವನ್ನು ಪಡೆಯಲು ಕಾತರನಾಗುತ್ತಾನೆ. ತನ್ನ ಹೃದಯಾಂತರಾಳದಿಂದ ಇದುವರೆಗೂ ತಾನು ಯಾವ ಪರಮಾತ್ಮನ ಬಗ್ಗೆ ಅಸ್ಪಷ್ಟವಾಗಿ ತಿಳಿದಿದ್ದನೋ, ಆ ಭಗವಂತನು ತಾನು ಸಿಕ್ಕಿಬಿದ್ದಿರುವ ಅಹಂಕಾರ ಕೇಂದ್ರಿತವಾದ ಈ ಸುಳಿಯಿಂದ ತನ್ನನ್ನು ಪಾರುಮಾಡಲಿ ಎಂದು ಅವನು ಬಯಸುತ್ತಾನೆ; ತನ್ನ ಅರಿವನ್ನು ಪ್ರಜ್ವಲಿಸಿ, ಆ ಮೂಲಕ ತನ್ನ ಆಧ್ಯಾತ್ಮಿಕ ಸಾಧನೆಗಳಿಗೆ ಹೊಸ ಜೀವ ತುಂಬಲಿ ಎಂದು ಆಶಿಸುತ್ತಾನೆ; ತನ್ನನ್ನು ಮುನ್ನಡೆಸುತ್ತ, ಎಲ್ಲ ಅಪಾಯ ಗಳಿಂದ ತನ್ನನ್ನು ರಕ್ಷಿಸಿ, ಸತ್ಯಸಾಕ್ಷಾತ್ಕಾರವನ್ನು ನೀಡಲಿ ಎಂದು ತವಕಿಸುತ್ತಾನೆ. ಆ ದಿವ್ಯ ಶಕ್ತಿಯನ್ನು ಕುರಿತು ಅವನು ಹೀಗೆ ಪ್ರಾರ್ಥಿಸುತ್ತಾನೆ:

**ನಾವು ನಾರಾಯಣನನ್ನು ತಿಳಿದುಕೊಳ್ಳೋಣ. ಅದಕ್ಕಾಗಿ ವಾಸುದೇವ ನಾದ ಅವನನ್ನು ಧ್ಯಾನಿಸೋಣ. ಆ ವಿಷ್ಣು ಅದಕ್ಕಾಗಿ ನಮ್ಮನ್ನು ಪ್ರಚೋದಿಸಲಿ.** (*ಮಹಾನಾರಾಯಣ ಉಪನಿಷತ್, ೧ : ೨೯*)

**"ಆ ರುದ್ರನು ನಮಗೆ ಶುಭ ಬುದ್ಧಿಯನ್ನು ಕೊಡಲಿ,"** (*ಶ್ವೇತಾಶ್ವತರೋಪನಿಷತ್, ೩ : ೪*)

**ಯಾವನ ಪ್ರಕಾಶವು ಆತ್ಮನ ಕಡೆಗೆ ನಮ್ಮ ಬುದ್ಧಿಗಳನ್ನು ತಿರುಗಿಸು ವುದೊ ಅಂತಹ ಆತ್ಮಬುದ್ಧಿಪ್ರಕಾಶಕನಾದ ದೇವನನ್ನು, ಬೇರೆ ಫಲವನ್ನಿಚ್ಛಿಸದೆ ಮೋಕ್ಷವನ್ನೇ ಬಯಸುತ್ತಿರುವ ಮುಮುಕ್ಷುವಾಗಿರುವ ನಾನು ಶರಣು ಹೊಂದುತ್ತೇನೆ.** (*ಶ್ವೇತಾಶ್ವತರೋಪನಿಷತ್, ೬ : ೧೮*)

**ಉತ್ಸಾಹಜನಕವಾದ ನಿನ್ನ ಮುಖದ ಮೂಲಕ ಯಾವಾಗಲೂ ನಮ್ಮನ್ನು ಕಾಪಾಡು!** (*ಶ್ವೇತಾಶ್ವತರೋಪನಿಷತ್, ೪ : ೨೧*)

## ಭಗವದನುಗ್ರಹ

ಈಗ ಸಹಾಯವು ಒದಗಿ ಬರುತ್ತದೆ; ಅವನಿಗೆ ಪ್ರೋತ್ಸಾಹ ದೊರೆತಂತಾಗಿ, ಅವನು ಏಳ್ಗೆಯನ್ನು ಹೊಂದುತ್ತಾನೆ. ಆ ದಿವ್ಯಶಕ್ತಿಯು ಹೀಗೆ ಅವನನ್ನು ಪವಿತ್ರನನ್ನಾಗಿ ಮಾಡುತ್ತದೆ; ಸಾಂತ್ವನವನ್ನು ನೀಡುತ್ತದೆ; ಶಕ್ತಿಪ್ರದಾನ ಮಾಡುತ್ತದೆ; ಅವನ ಅಂತರಂಗದಲ್ಲಿ ಜ್ಯೋತಿಯನ್ನು ಬೆಳಗಿಸುತ್ತದೆ. ಆ ದಿವ್ಯಶಕ್ತಿಯ ಮೇಲೆ ನಾವು ನಿರ್ಭರರಾಗಿರಬಹುದು. ಅದು ಎಂದೆಂದೂ ಅಳಿಯದ, ಅವ್ಯಯವಾದ ಅನಂತ ಶಕ್ತಿಯಾಗಿದೆ. ಇದನ್ನೇ ಭಗವಂತನ **ಕರುಣೆ, ಪ್ರಸಾದ, ಅನುಗ್ರಹ** ಎಂದು ಕರೆಯುವುದು.

ಭಗವಂತನ ಈ ಕರುಣೆಯು ಅವ್ಯಾಜವಾದುದು. ಜನರ ಅರ್ಹತೆ, ಪ್ರಾರ್ಥನೆ, ಅಂತರಂಗದ ಸಂಸ್ಕಾರಗಳು ಅಥವಾ ಪೂರ್ವಕರ್ಮಗಳನ್ನು ಲೆಕ್ಕಿಸದೆ ಎಲ್ಲರ ಮೇಲೆ ಹರಿದು ಬರುವಂಥದ್ದು. ಅದು ಕಾರಣ–ಕಾರ್ಯ ನಿಯಮವನ್ನು ಮೀರಿರುವಂಥದ್ದು. ಹೀಗಾಗಿ ಅನುಕೂಲಕರವಾದ ಪರಿಸ್ಥಿತಿಗಳಿಲ್ಲದೆ ಬಳಲುತ್ತಿರುವ, ಆದರೆ ಪ್ರಯತ್ನವನ್ನು ಮುನ್ನಡೆಸಿರುವ ಸಾಧಕನು, ವಿವಿಧ ಬಗೆಗಳಲ್ಲಿ, ಅನಿರೀಕ್ಷಿತ ವಿಧಾನದಲ್ಲಿ ಅನುಗ್ರಹವನ್ನು ಪಡೆದುಕೊಳ್ಳುವನು. ಆ ಮೂಲಕ ತನ್ನ ಆಧ್ಯಾತ್ಮಿಕ ಜೀವನಕ್ಕೆ ಒತ್ತಾಸೆಯನ್ನು ತಂದುಕೊಳ್ಳುವನು.

ಇನ್ನು ಕೆಲವರಿರುತ್ತಾರೆ. ತಮ್ಮ ಜೀವನದುದ್ದಕ್ಕೂ ಪ್ರಾಪಂಚಿಕ ಬಯಕೆಗಳೇ ಅವರನ್ನು ಅತ್ತಿತ್ತ ದೂಡುತ್ತಿರುತ್ತವೆ; ಮತ್ತೆ ಕೆಲವರು ಉನ್ನತವಾದ ಜೀವನದ ಬಗ್ಗೆ ಆಸಕ್ತಿಯನ್ನೇ ಹೊಂದಿರುವುದಿಲ್ಲ. ಮತ್ತೂ ಕೆಲವರಿರುವರು. ಅವರು ಈ ಬಗೆಯ ಆಧ್ಯಾತ್ಮಿಕ ಆದರ್ಶಜೀವನಕ್ಕೆ ವಿರುದ್ಧವಾಗಿರುವರು. ಆದರೂ ಈ 'ದಯಾ ಪೂರ್ಣ ಬೆಳಕು' ಅವರೆಲ್ಲರಲ್ಲೂ ಆಧ್ಯಾತ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುವುದು; ಪ್ರಾಪಂಚಿಕತೆಯಿಂದ ವಿಮುಖರನ್ನಾಗಿ ಮಾಡಿ, ಅವರನ್ನು ಆಧ್ಯಾತ್ಮಿಕ ಜಗತ್ತಿಗೆ ಪ್ರವೇಶ ಮಾಡಿಸುವುದು.

ಹಾಗಾದರೆ ನಿಜವಾಗಿಯೂ, ಈ ಅನುಗ್ರಹವೆಂಬುದು ಏನು?

ಇದರ ಬಗ್ಗೆ ಉಪನಿಷತ್ತುಗಳಿಂದ ನಾವು ಏನನ್ನು ತಿಳಿದುಕೊಳ್ಳ ಬಹುದು, ನೋಡೋಣ.

ಉಪನಿಷತ್ತುಗಳು ಪ್ರಾಚೀನ ಋಷಿಮುನಿಗಳ ಇಂದ್ರಿಯಾತೀತ ಅನುಭವಗಳ ಭಾಂಡಾಗಾರದಂತಿವೆ. ತಾವು ಅನುಭವಿಸಿದ್ದನ್ನು ಇಲ್ಲಿ ಋಷಿಗಳು ನೇರವಾಗಿ ವಿವರಿಸುತ್ತಾರೆ. ಈ ಚಿಂತನೆಗಳಲ್ಲಿ ತಾತ್ತ್ವಿಕವಾದ ಸಮಾನತೆ ಇರಬೇಕೆಂಬುದರ ಬಗ್ಗೆ ಅವರು ತಲೆಕೆಡಿಸಿಕೊಂಡವರಲ್ಲ; ಅದಕ್ಕಾಗಿ ಬೌದ್ಧಿಕ ಕಸರತ್ತುಗಳಲ್ಲಿ ತೊಡಗಿದವರೂ ಅಲ್ಲ.

**ಈ ಆತ್ಮನು ಪ್ರವಚನದಿಂದ (ಅನೇಕ ವೇದಗಳನ್ನು ಓದಿದುದರಿಂದ) ಲಭ್ಯನಲ್ಲ; ಮೇಧಾಶಕ್ತಿಯಿಂದಲೂ, ಬಹಳ ಶ್ರವಣದಿಂದಲೂ ಲಭ್ಯ ನಲ್ಲ.** (*ಕಠೋಪನಿಷತ್,* ೧ : ೨ : ೨೩)

ಯಾವುದೋ ಒಂದು ಕ್ರಿಯೆಯ ಫಲವಾದ ಒಂದು ಸಂಯುಕ್ತ ವಸ್ತು, ಅದು ಯಾವುದರಿಂದ ಮಾಡಲ್ಪಟ್ಟಿದೆಯೋ ಆ ಸರಳ ದ್ರವ್ಯಗಳಾಗಿ ಮತ್ತೆ ಮಾರ್ಪಡಲೇಬೇಕು. ಋಷಿಗಳು ತಾವು ನಡೆಸಿದ ಆಧ್ಯಾತ್ಮಿಕ ಅನ್ವೇಷಣೆಯ ಅವಧಿಯಲ್ಲಿ ಕಂಡು ಕೊಂಡ ಸತ್ಯ ಇದು. ಕ್ರಿಯೆಗಳು ಮೂಲಭೂತ ದ್ರವ್ಯಗಳನ್ನು ಒಂದು ಸಂಯುಕ್ತ ಪದಾರ್ಥವಾಗಿ ಒಟ್ಟುಗೂಡಿಸಬಲ್ಲುವೇ ಹೊರತು, ದ್ರವ್ಯವಸ್ತುವನ್ನೇ ಉತ್ಪಾದಿಸಲಾರವು. **ಬ್ರಹ್ಮ** ಅಥವಾ **ಚೈತನ್ಯವು** ಯಾವತ್ತೂ ಸಂಯುಕ್ತವಸ್ತುವಾಗದೇ ಉಳಿಯುವ ನಿತ್ಯವಾದ ವಸ್ತುವಾಗಿದೆ. ಹಾಗೆಂದೇ ಅದು ಎಲ್ಲದರ ಮೂಲ ಸತ್ವವಾಗಿದೆ; ಎಲ್ಲ ದ್ರವ್ಯಗಳ ದ್ರವ್ಯವಾಗಿದೆ. ಇಂಥದ್ದನ್ನು ಯಾವ ಪ್ರಯತ್ನದಿಂದಾಗಲಿ, ಆಧ್ಯಾತ್ಮಿಕ ಸಾಧನೆಯನ್ನೂ ಕೂಡಿಕೊಂಡು ಯಾವ ಕ್ರಿಯೆಯಿಂದಲಾಗಲಿ, ಉತ್ಪಾದಿಸಲು ಸಾಧ್ಯವಿಲ್ಲ. ಆಧ್ಯಾತ್ಮಿಕ ಸಾಧನೆಗಳು ಈ ಸತ್ಯತತ್ತ್ವದ ಸಾಕ್ಷಾತ್ಕಾರದ ಮಾರ್ಗದಲ್ಲಿರುವ ಅಡೆತಡೆಗಳನ್ನು ನಿವಾರಣೆ ಮಾಡುತ್ತವೆ, ಅಷ್ಟೇ.

**ಅಕೃತವು (ನಿತ್ಯವಸ್ತುವು) ಕೃತದಿಂದ (ಅನಿತ್ಯವಾದುದಕ್ಕೆ ಸಾಧನವಾದ ಕರ್ಮದಿಂದ) ಆಗುವುದಿಲ್ಲ.** (*ಮುಂಡಕೋಪನಿಷತ್,* ೧ : ೨ : ೧೨)

ದಿವ್ಯತೆಯು ತಾನೇ ತಾನಾಗಿ ಪ್ರಕಟಗೊಳ್ಳಬೇಕು:

**ಯಾವನನ್ನು ಈ ಸಾಧಕನು ಬೇಡುತ್ತಾನೆಯೊ ಅವನಿಗೆ ಇವನು ಲಭ್ಯನು. ಅವನಿಗೆ ಈ ಆತ್ಮನು ತನ್ನ ಯಥಾರ್ಥವಾದ ಸ್ವರೂಪವನ್ನು ತೋರಿಸುತ್ತಾನೆ.** (*ಕಠೋಪನಿಷತ್,* ೧ : ೨ : ೨೩)

ಸ್ವಚ್ಛಂದವಾದ ದಿವ್ಯಚೈತನ್ಯವು ಈ ಬಗೆಯಲ್ಲಿ ತಾನೇ ತಾನಾಗಿ ಪ್ರಕಟಗೊಳ್ಳುವುದನ್ನೇ ಋಷಿಗಳು **ಅನುಗ್ರಹ** ಎಂದು ಕರೆಯುತ್ತಾರೆ. ಹೀಗೆ ಈ ಮಹಾಮೇಧಾವಿಗಳು, ತಮ್ಮ ಇಡೀ ವ್ಯಕ್ತಿತ್ವವನ್ನು ಮುಡಿಪಾಗಿಟ್ಟು ತೀವ್ರವಾದ ಆಧ್ಯಾತ್ಮಿಕ ಸಂಘರ್ಷವನ್ನು ನಡೆಸಿ, ತದನಂತರ, "ನಮ್ಮ ವ್ಯಕ್ತಿಗತ ಪ್ರಯತ್ನದಲ್ಲಿ ಬಾಹ್ಯ ನೆರವು ಒದಗಿ ಬರದೆ, ನಾವು ಆತ್ಮವನ್ನು ಸಾಕ್ಷಾತ್ಕರಿಸಿಕೊಳ್ಳಲಾರೆವು; ಆ ಪರಮ ಚೈತನ್ಯದ ಅನುಗ್ರಹದಿಂದಲೇ ನಾವು ಅದನ್ನು ಪಡೆಯಬಲ್ಲೆವು" ಎಂದು ಕಂಡುಕೊಂಡರು.

**ಆ ಈಶ್ವರನ ಅನುಗ್ರಹದಿಂದ ವಿಷಯ–ಭೋಗ ಸಂಕಲ್ಪರಹಿತನೂ, ಅಚಿಂತ್ಯ ಮಹಿಮೆಯುಳ್ಳವನೂ ಆದ ಭಗವಂತನನ್ನು ಯಾರು ನೋಡುತ್ತಾನೆಯೋ, ಅವನು ದುಃಖದಿಂದ ಮುಕ್ತನಾಗುತ್ತಾನೆ.**

(*ಶ್ವೇತಾಶ್ವತರೋಪನಿಷತ್,* ೩ : ೨೦)

ಈ ಋಷಿಗಳು ಚಿರಂತನ ಸತ್ಯವನ್ನು ತಮ್ಮ ಅಂತರಾತ್ಮವೆಂದೂ, ಹಾಗೆಯೇ ಎಲ್ಲರಲ್ಲೂ ಇರುವ ಪ್ರತ್ಯಗಾತ್ಮವೆಂದೂ ಅನುಭವಕ್ಕೆ ತಂದುಕೊಂಡರು. ಆ ಆತ್ಮವು ಯಾವಾಗಲೂ ಪವಿತ್ರವಾಗಿರುವುದು, ಯಾವಾಗಲೂ ಸ್ವತಂತ್ರವಾಗಿರುವುದು, ಬೇರೆ ಯಾವ ಎರಡಿಲ್ಲದ ಕೇವಲ ಏಕಮಾತ್ರ ತತ್ತ್ವ ಇದು; ಅನಂತಜ್ಞಾನ ಮತ್ತು ಅನಂತ ಜ್ಯೋತಿಸ್ವರೂಪವಿದು, ಇದಕ್ಕೆ ಕೆಡುಕಿನ ಅಥವಾ ದುಃಖದ ಸಂಪರ್ಕವೇ ಇಲ್ಲ ಎಂದೆಲ್ಲ ಅವರು ಕಂಡುಕೊಂಡರು. ತಮ್ಮ ಆನಂದೋನ್ಮತ್ತತೆಯಿಂದ, ಆ ಸಾಕ್ಷಾತ್ಕಾರಕ್ಕೆ, ಮಾತುಗಳ ರೂಪ ವನ್ನು, ಉಪನಿಷತ್ತುಗಳಲ್ಲಿ ಅವರು ಹೀಗೆ ನೀಡಿದ್ದಾರೆ:

**ಅಜ್ಞಾನವೆಂಬ ಅಂಧಕಾರಕ್ಕಿಂತ ಆಚೆಗಿರುವ ಪ್ರಕಾಶಸ್ವರೂಪನಾದ ಮಹಾನ್ ಪುರುಷನನ್ನು ನಾನು ಅರಿತಿದ್ದೇನೆ. ಅವನನ್ನು ಅರಿತುಕೊಂಡ ಮನುಷ್ಯನು ಮೃತ್ಯುವನ್ನು ದಾಟುತ್ತಾನೆ. ಪರಮಪದದ ಪ್ರಾಪ್ತಿಗೆ ಇದಕ್ಕಿಂತ ಬೇರೆ ದಾರಿಯಿಲ್ಲ.** (*ಶ್ವೇತಾಶ್ವತರೋಪನಿಷತ್* ೩ : ೮ )

ಅವರು ಭಗವತ್ ಸತ್ಯವನ್ನು ಅಪ್ರತಿಮವೂ ಸೀಮಾತೀತವೂ ಆದ ಸರ್ವೋಚ್ಚ ಶಕ್ತಿಯ ರೂಪದಲ್ಲಿಯೂ ಸಾಕ್ಷಾತ್ಕರಿಸಿ ಕೊಂಡಿದ್ದರು.

**ಧ್ಯಾನಯೋಗದಲ್ಲಿ ಸಮಾಹಿತರಾದ ಋಷಿಗಳು ತನ್ನ ಗುಣಗಳಿಂದ (ಪ್ರಕೃತಿಯ ಅಥವಾ ಸಗುಣ ಬ್ರಹ್ಮವಾದ ಈಶ್ವರನ ಗುಣಗಳಿಂದ) ಆವರಿಸಲ್ಪಟ್ಟ ದೇವನ ಆತ್ಮಶಕ್ತಿಯನ್ನು ಸಾಕ್ಷಾತ್ಕರಿಸಿಕೊಂಡರು.**

(*ಶ್ವೇತಾಶ್ವತರೋಪನಿಷತ್,* ೧ : ೩)

(*ಮುಂದುವರಿಯುವುದು*)

**ಜೀವನದೀಪವಾಗಿ ಉಪನಿಷತ್ತುಗಳು**

ಉಪನಿಷತ್ತುಗಳ ಗಂಭೀರ ಸಾಗರದಲ್ಲಿ ಹೊಸಹೊಸದಾಗಿ ಮಿನುಗುತ್ತ ಪ್ರಕಾಶಿಸುವ ಆತ್ಮೋದ್ಧಾರಕ ಸತ್ಯಗಳು ಸತ್ಯಾನ್ವೇಷಿಗಳ ಮನಸ್ಸನ್ನು ಅನಂತ ಕಾಲದವರೆಗೂ ಸೂರೆಗೊಳ್ಳುತ್ತಿರುತ್ತವೆ. ಉಪನಿಷತ್ತುಗಳು ಸದಾಚಾರಕ್ಕೆ ಒತ್ತುಕೊಟ್ಟು ಧಾರ್ಮಿಕ ಹಾಗೂ ಶಾಂತಿಯುತ ಜೀವನಕ್ಕೆ ಮಾರ್ಗದರ್ಶಿಯಾಗಿವೆ. ಮಾನವನ ಉದ್ಧಾರವೇ ಉಪನಿಷತ್ತಿನ ಮಹರ್ಷಿಗಳ ಹಾಗೂ ದ್ರಷ್ಟಾರರ ಉಪದೇಶಗಳ ಪರಮೋದ್ದೇಶ. ಆತ್ಮಸಾಧನೆ ಮತ್ತು ಸಿದ್ಧಿಯ ಸಾಹಸವನ್ನು ಕೈಗೊಳ್ಳುವ ಧೀರರಿಗೆ ಉಪನಿಷತ್ತುಗಳು ದಾರಿದೀಪವಾಗಿವೆ. ವೈರಾಗ್ಯ ಮತ್ತು ತ್ಯಾಗಗಳ ಮೂಲಕ ಬ್ರಹ್ಮಸಾಕ್ಷಾತ್ಕಾರಕ್ಕೆ ಉಪನಿಷತ್ತುಗಳು ಸಂಪೂರ್ಣ ಒತ್ತು ಕೊಟ್ಟಿವೆಯಾದರೂ ಸಾಮಾನ್ಯ ಮಾನವನ ಏಳಿಗೆಗೂ ಪರಿಶುದ್ಧ ಜೀವನಕ್ಕೂ ಅಗತ್ಯವಾದ ಯಮ, ನಿಯಮ, ಬ್ರಹ್ಮಚರ್ಯ, ಧ್ಯಾನ ಮೊದಲಾದವುಗಳನ್ನು ಕಡೆಗಣಿಸಿಲ್ಲ. ಇವುಗಳ ತಳಹದಿಯ ಮೇಲೆ ಧೀರರು ಆತ್ಮಸಾಕ್ಷಾತ್ಕಾರದ ಸಾಧನೆಯಲ್ಲಿ ತೊಡಗಬೇಕು ಎಂದು ಉಪನಿಷತ್ತುಗಳು ಹೇಳುತ್ತವೆ. – **ಪ್ರೊ. ಕೆ.ಎಸ್. ಕೃಷ್ಣಮೂರ್ತಿ**

(ಆಧಾರ: *ಉಪನಿಷತ್ತುಗಳ ಸಾರ* )